Q.P. Code: 35401

# ಚತುರ್ಥ ಸೆಮಿಸ್ಟರ್ ಬಿ.ಕಾಂ./ಬಿ.ಬಿ.ಎ. ಪದವಿ ಪರೀಕ್ಷೆ, ಜುಲೈ/ಆಗಸ್ಟ್ 2023

(NEP)

## ಕನ್ನಡ ಭಾಷಾ ಪತ್ರ

## ಕನ್ನಡ ವೈಶಾಖಿ - 4

ಸಮಯ: 2 ಗಂಟೆಗಳು ಗರಿಷ್ಠಾಂಕಗಳು : 60

**I. ಈ ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆ ಮಾತ್ರ ಉತ್ತರಿಸಿ: (5x2=10)**

1) ರತ್ನಾಕರವರ್ಣಿಯ ನಾಲ್ಕು ಕೃತಿಗಳನ್ನು ಹೆಸರಿಸಿ?

2) 'ಸಾವಿನೆಡೆಗೆ ಸವಾರಿ' ಪಠ್ಯದ ಮೂಲ ಕರ್ತೃ ಯಾರು? ಇವರು ಯಾವ ದೇಶದ ಪ್ರಸಿದ್ಧ ನಾಟಕಕಾರರಾಗಿದ್ದಾರೆ ತಿಳಿಸಿ.

3) 'ಮನುಷ್ಯ ಜಾತಿ ತಾನೊಂದೆ ವಲಂ' ಎಂದವರು ಯಾರು ? ಯಾವ ಪಾಠದಲ್ಲಿ ಉಲ್ಲೇಖಿಸಲಾಗಿದೆ?

4) ಅಲ್ಲಮಪ್ರಭು ದೇವರ ಜನ್ಮಸ್ಥಳ ಯಾವುದು? ಮತ್ತು ಅಂಕಿತ ನಾಮ ಏನು?

5) ನಾಗ ತಂಗಿಯ ಮದುವೆಗೆ ಯಾರನ್ನು ಕರೆದುಕೊಂಡು ಯಾವ ಬೆಟ್ಟಕ್ಕೆ ಹೋಗುತ್ತಾನೆ? ಇದು ಯಾವ ಪದ್ಯದಲ್ಲಿ ಈ ಪ್ರಸಂಗವಿದೆ?

6) 'ಹತ್ಯೆ' ಕಥೆಯ ಕರ್ತೃ ಯಾರು ? ಅವರ ನಾಲ್ಕು ಕಾದಂಬರಿಗಳನ್ನು ಹೆಸರಿಸಿ.

7) 'ಸಾವು' ಲೇಖನ ಬರೆದವರು ಯಾರು ? ಅವರ ನಾಲ್ಕು ಕವನ ಸಂಕಲನಗಳ ಹೆಸರನ್ನು ಬರೆಯಿರಿ.

**II. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. (5x4=20)**

1) 'ಸಾವಿನೆಡೆಗೆ ಸವಾರಿ' ನಾಟಕದ ಪಾರ್ವತಮ್ಮಳ ವ್ಯಕ್ತಿತ್ವವನ್ನು ತಿಳಿಸಿ.

2) ಪುಣ್ಯಶ್ರೀ ಲಿಂಗಮ್ಮಳ ವಚನದ ಸಾರಾಂಶವನ್ನು ಬರೆಯಿರಿ.

3) ಬುದ್ಧ, ಏಸು, ಪೈಗಂಬರ್, ಗುರುನಾನಕ, ಪಂಪ, ನುಡಿ ಮುತ್ತುಗಳನ್ನು 'ಕೂಡಿ ಬಾಳುವ ಸುಖ' ಲೇಖನದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿ.

4) ಅಂಬೇಡ್ಕರ್, ನೆಹರು, ಗಾಂಧೀಜಿಯವರ ಭಾರತದ ಬಗೆಗಿನ ಆಶಯವೇನು?

5) 'ಮುತ್ತೈದೆ ಸಾವು' ಪಠ್ಯದ ಮಲ್ಲಿಯ ವ್ಯಕ್ತಿತ್ವವನ್ನು ಚಿತ್ರಿಸಿ.

6) ಭೂಮಿಯ ತಾಪಮಾನಕ್ಕೆ ಕಾರಣಗಳನ್ನು ತಿಳಿಸಿ.

**III. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ: (3x10=30)**

1) 'ಭರತೇಶ ವೈಭವ'ದಲ್ಲಿ ಬರುವ ಸಮುದ್ರ ವರ್ಣನೆಯನ್ನು ವಿವರಿಸಿ?

2) 'ಹೊಳೆ ಮತ್ತು ಸಮುದ್ರ ಮೀನುಗಾರರ ಜೀವನಾಧಾರವೂ ಹೌದು, ಜೀವ ತೆಗೆಯುವ ಗುಪ್ತ ತಾಣವೂ ಹೌದು' ಈ ಮಾತನ್ನು 'ಸಾವಿನೆಡೆಗೆ ಸವಾರಿ' ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

3) ವಚನಕಾರರ ವಚನಗಳಲ್ಲಿ ಬರುವ ಸಹಬಾಳ್ವೆಯನ್ನು ಕುರಿತು ಅವರ ನಿಲುವನ್ನು ವಿವೇಚಿಸಿ.

4) ಮಲ್ಲಿ ಮತ್ತು ನಾಗನ ವ್ಯಕ್ತಿತ್ವವನ್ನು 'ಮತ್ತೈದೆ ಸಾವು' ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

5) ಭೂಮಿಯ ತಾಪಮಾನಕ್ಕೆ ಕಾರಣಗಳನ್ನು ಹಾಗೂ ಪರಿಹಾರೋಪಾಯಗಳನ್ನು ವಿವರಿಸಿ.

* * *